# *1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 13 / 2019**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಮಹೇಶ | | *ಪ್ರಮಾಣ ಮಾಡಿದ ದಿನಾಂಕಃ* |
| ತಂದೆ/ಗಂಡನ ಹೆಸರು | ಃ ಸಣ್ಣಪ್ಪ | | **07.03.2020** |
| ವಯಸ್ಸು | ಃ 32 ವರ್ಷ | | |
| ವೃತ್ತಿ | ಃ ಕೂಲಿ | | ಪ್ರಾ.ಸಾ. ಃ 3 |
| ವಾಸ ಸ್ಥಳ | ಃ ಯಾಂದಳ್ಳಿ | | ಚಾ.ಸಾ. ಃ 6 |

***ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ***

*2* ನೇ ಆರೋಪಿ ಶ್ರೀನಿವಾಸನನ್ನು ನಾನು ನೋಡಿಲ್ಲ. ತಲೆಮರೆಸಿಕೊಂಡ *1* ನೇ ಆರೋಪಿ ಹನುಮಂತ ಪಾಟೀಲನನ್ನು ನಾನು ನೋಡಿಲ್ಲ. ನಜರ್ ಬಾದ್ ಪೊಲೀಸ್ ರು ನನ್ನನ್ನು ಪೊಲೀಸ್ ಠಾಣೆಗೆ ನಾನು ಟೀ ಕುಡಿಯುತ್ತಿದ್ದಾಗ ಕರೆದು *2* ಸಹಿ ಮಾಡು ಎಂದರು ನಾನು ಮಾಡಿದೆ. *2* ನೇ ಆರೋಪಿಯಿಂದ ಏನನ್ನು ವಶಪಡಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಈಗ ನೋಡುತ್ತಿದ್ದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ಈಗಾಗಲೇ ನಿಪಿ-*10* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ- *10(ಬಿ)* ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ನಜರ್ ಬಾದ್ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ ಅದರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಹಾಗೂ ಅದರ ಅಡಿಯಲ್ಲಿ ಏನು ವಶಪಡಿಸಿಕೊಳ್ಳಲಾಗಿದೆ ಎಂದು ನನಗೆ ಗೊತ್ತಿಲ್ಲ. ತಲೆ ಮರೆಸಿಕೊಂಡ *1* ನೇ ಆರೋಪಿ ಹನುಮಂತ ಪಾಟೀಲ್ ನಿಂದ ಏನು ವಶಪಡಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ದಾಖಲೆಯ ಮೇಲೆ ನನ್ನ ಸಹಿ ಇದೆ, ಸದರಿ ದಾಖಲೆಯನ್ನು ಈಗಾಗಲೇ ನಿಪಿ-*11* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-*11(ಬಿ)* ಎಂದು ಗುರುತಿಸಲಾಯಿತು. ಅದರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಹಾಗೂ ಅದರ ಅಡಿಯಲ್ಲಿ ಏನು ವಶಪಡಿಸಿಕೊಳ್ಳಲಾಗಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸ್ ರು ನನ್ನನ್ನು ಕೂಗಿದರು ನಾನು ಅಲ್ಲಿ ಹೋದಾಗ ನನ್ನ ಹತ್ತಿರ ಎರಡು ಸಹಿ ಮಾಡಿಸಿಕೊಂಡರು.

***ಈ ಹಂತದಲ್ಲಿ ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-***

ದಿನಾಂಕ **16.06.2015** ರಂದು ನಜರ್ ಬಾದ್ ಪೊಲೀಸ್ ಠಾಣೆಯಲ್ಲಿ **2** ನೇ ಆರೋಪಿ ಶ್ರೀನಿವಾಸ್ ನಿಂದ ಒಂದು ಆಕ್ಟಿವಾ ಸ್ಕೂಟರ್ ನ್ನು ಹಾಗೂ ನಗದು ಹಣ **30** ಸಾವಿರ ರೂಗಳನ್ನು, ನಿವೇಶನಕ್ಕೆ ಸಂಬಂದಪಟ್ಟ ಸ್ಥಿರ ಸ್ವತ್ತಿನ ಶುದ್ಧ ಕ್ರಯ ಪತ್ರದ ಅಸಲು, ಜನೆರಲ್ ಪವರ್ ಪಾಟರ್ನಿಯ ಅಸಲು ಪ್ರತಿ, ಮನೆ ಕಂದಾಯ ಪಟ್ಟ ಮತ್ತು ಎರಡು ರಶೀದಿಗಳು ಮತ್ತು ಮನೆಯ ಕಂದಾಯ ಪಟ್ಟಾ ರಶೀದಿ ಪುಸ್ತಕ ಹಾಗೂ **6** ರಶೀದಿಗಳು, ಗ್ರಾಮೀಣ ಅಭಿವೃದ್ದಿ ಹಾಗೂ ಪಂಚಾಯತ್ ರಾಜ್ ಇಲಾಖೆಯ **11** ನಮೂನೆ , ಪಿರ್ಯಾದಿಗೆ ಸೇರಿದ ಮನೆಯ ಬೀಗದ ಕೈಗಳನ್ನು ನನ್ನ ಸಮಕ್ಷಮ ವಶಪಡಿಸಿಕೊಂಡು ನಿಪಿ-**10** ರಂತೆ ಮಹಜರ್ ನ್ನು ಸಮಯ **2.30** ರಿಂದ **3.30** ರ ವರೆಗೆ ಬರೆದಿರುತ್ತಾರೆ ಅಂದರೆ ಸರಿಯಲ್ಲ. ಅದೇ ದಿನ ಸಂಜೆ **5** ಗಂಟೆಯಿಂದ **5.45** ಗಂಟೆಯವರೆಗೆ ತಲೆ ಮರೆಸಿಕೊಂಡು ಮೊದಲನೇ ಆರೋಪಿಯ ಕಡೆಯಿಂದ **18** ಸಾವಿರ ರೂಗಳನ್ನು ನನ್ನ ಸಮಕ್ಷಮ ವಶಪಡಿಸಿಕೊಂಡು ನಿಪಿ-**11** ರಂತೆ ಮಹಜರ್ ನ್ನು ಬರೆದಿರುತ್ತಾರೆ ಅಂದರೆ ಸರಿಯಲ್ಲ.

**ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.**

***ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಃ-***

**ಆರೋಪಿ ಪರ ವಕೀಲರವರಿಂದ ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.**

*ಮರು ವಿಚಾರಣೆಃ- ಇಲ್ಲ.*

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

**07.03.2020**

***1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***